# ನಮ್ಮ ಸಮಸ್ಯೆಗಳು ಮತ್ತು ವಿವೇಕಾನಂದರ ಮಾನವೀಯ ಪರಿಹಾರ

**ಕೆ.ಎಲ್. ಪದ್ಮಿನಿ**

ಜಗತ್ತು ಆಧುನಿಕವಾದಂತೆಲ್ಲ ನಮ್ಮ ಬದುಕಿನ ಸಮಸ್ಯೆಗಳೂ ಅಧಿಕವಾಗುತ್ತಿವೆ, ಸಂಕೀರ್ಣವಾಗುತ್ತಿವೆ. ಹಲವು ಸಮಸ್ಯೆಗಳಿಗೆ ಪರಿಹಾರವೇ ಇಲ್ಲವೇನೋ ಅನ್ನಿಸುತ್ತವೆ. ಆದರೆ ಸ್ವಾಮಿ ವಿವೇಕಾನಂದರ ವಿಚಾರಧಾರೆ, ಚಿಂತನೆಗಳ ಅಧ್ಯಯನದಿಂದ ಅನೇಕ ಜಟಿಲ ಸಮಸ್ಯೆಗಳಿಗೆ ಅತ್ಯಂತ ಉತ್ತಮ ಪರಿಹಾರ ದೊರೆಯಬಹುದು - ಇದನ್ನು ಇಂದು ನಮ್ಮ ಸಮಾಜ ಅರಿತುಕೊಳ್ಳುತ್ತಿದೆ. ಈ ಕುರಿತು ಇಲ್ಲಿ ವಿಶ್ಲೇಷಿಸಿರುವ ಲೇಖಕಿ ತತ್ತ್ವಶಾಸ್ತ್ರದ ಪ್ರಾಧ್ಯಾಪಕಿಯಾಗಿದ್ದರು, ಹಾಗೂ ಹೊಳಲ್ಕೆರೆಯ ಕಾಲೇಜೊಂದರಲ್ಲಿ ಪ್ರಾಚಾರ್ಯರಾಗಿ ನಿವೃತ್ತರಾದವರು. ಉತ್ತಮ ವಾಗ್ಮಿ, ಚಿಂತಕಿ ಹಾಗೂ ಲೇಖಕಿಯಾಗಿರುವ ಅವರು ಪ್ರಸ್ತುತ ಮೈಸೂರು ನಿವಾಸಿಗಳಾಗಿದ್ದಾರೆ.

**ಪ್ರಸ್ತುತ ಪರಿಸ್ಥಿತಿ:** ನಾವು ಈಗಲೂ ಸಾವು ಬದುಕಿನ ಸಮಸ್ಯೆಯಿಂದ ಒದ್ದಾಡುತ್ತಿದ್ದೇವೆ. ಅದಕ್ಕೆ ಮುಖ್ಯ ಕಾರಣ ನಾವು ಸಂಗತಿಗಳನ್ನು ಬಿಡಿಬಿಡಿಯಾಗಿ ಗಮನಿಸುತ್ತಿರುವುದು. ಒಂದು ಅರ್ಥದಲ್ಲಿ ನಾವು ಪ್ರತ್ಯೇಕತಾವಾದಿಗಳು. ಭೂತಕಾಲದ ಸಂಗತಿಗಳು ಭೂತಕಾಲದ್ದು, ಅವು ಘಟಿಸಿ ಮುಗಿದಿವೆ, ಅದಕ್ಕಾಗಿ ನಾವು ತಲೆ ಕೆಡಿಸಿಕೊಳ್ಳಬೇಕಾಗಿಲ್ಲ ಎಂದು ಕೊಡವಿಕೊಳ್ಳುತ್ತೇವೆ. ಭವಿಷ್ಯತ್ಕಾಲದವುಗಳು ಇನ್ನೂ ಸಂಭವಿಸಬೇಕಾಗಿವೆ, ಅವುಗಳಿಗಾಗಿ ತಲೆಕೆಡಿಸಿಕೊಳ್ಳಬೇಕಾಗಿಲ್ಲ ಎಂದು ಪಕ್ಕಕ್ಕೆ ಸರಿಸುತ್ತೇವೆ. ವರ್ತಮಾನ ಮಾತ್ರ ಸಂಪೂರ್ಣವಾಗಿ ನಿಶ್ಚಿತ ಎಂದು ಅದನ್ನು ಉಲ್ಲಾಸ ಸಂಭ್ರಮಗಳಿಂದ ಅನುಭವಿಸುತ್ತೇವೆ.

ನಾವೆಲ್ಲಾ ವೈಯಕ್ತಿಕ ವಿಶಿಷ್ಟತೆಯುಳ್ಳವರು, ನಾವೆಲ್ಲಾ ಪರಸ್ಪರ ಸ್ವತಂತ್ರರು ಮತ್ತು ಸಮರ್ಥರು, ನಮ್ಮ ನಮ್ಮ ಆಸೆ ಆಕಾಂಕ್ಷೆಗಳೆಲ್ಲಾ ನಮ್ಮ ನಮ್ಮವೇ, ಯಾರೊಬ್ಬರೂ ಯಾರೊಬ್ಬರಿಗಾಗಿಯೂ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ, ಯಾರಿಗೂ ಯಾರೊಬ್ಬರ ಸ್ವಂತಿಕೆಯ ಮಧ್ಯೆ ಮೂಗು ತೂರಿಸುವ ಹಕ್ಕಾಗಲೀ ಅಧಿಕಾರವಾಗಲೀ ಇಲ್ಲ, ಯಾರೂ ಯಾರಿಗಾಗಿಯೂ ಮಾದರಿಗಳನ್ನಾಗಲೀ, ಸಂಪನ್ಮೂಲಗಳನ್ನಾಗಲೀ, ಸಾಧನ ಸಲಕರಣೆಗಳನ್ನಾಗಲೀ ಒದಗಿಸುವ ಗೋಜಿಗೆ ಹೋಗಬೇಕಾಗಿಲ್ಲ, ಅವರವರದು ಅವರವರಿಗೆ. ಯಾರಿಗೆ ಯಾವುದು ಬೇಕೋ ಅದನ್ನು ಅವರೇ ಶ್ರಮವಹಿಸಿ ಪಡೆದುಕೊಳ್ಳುತ್ತಾರೆ. ಇದು ಸ್ಪರ್ಧಾಯುಗ. ನಮ್ಮ ನಮ್ಮ ಉಳಿವಿಗಾಗಿ ನಾವೇ ವೈಯಕ್ತಿಕವಾಗಿ ಹೋರಾಡಬೇಕು. ನಮ್ಮದು ಪ್ರಜಾಸತ್ತಾತ್ಮಕತೆ, ಪ್ರತಿಯೊಬ್ಬರೂ ಏಕಮೇವಾದ್ವಿತೀಯರು. ಯಾರೂ ಯಾರೊಬ್ಬರ ಜೀವನರೀತಿಯಲ್ಲಿ ಮಧ್ಯೆ ಪ್ರವೇಶ ಮಾಡುವಂತಿಲ್ಲ , ಹಾಗೆ ಮಾಡುವ ಅಗತ್ಯ ಕೂಡ ಇಲ್ಲ ಎಂದೇನೋ ದೃಢವಾಗಿ ಹೇಳುತ್ತೇವೆ.

ಆದರೂ ನಮ್ಮ ಸಮಾಜ, ನಮ್ಮ ದೇಶದ ಆಡಳಿತಾತ್ಮಕ ವ್ಯವಸ್ಥೆ ಯಾರೊಬ್ಬರನ್ನೂ ಬಿಡದೆ ಪ್ರತಿಯೊಬ್ಬ ಪ್ರಜೆಯ ಕಲ್ಯಾಣಕ್ಕಾಗಿ, ಸರ್ವತೋಮುಖ ಅಭಿವೃದ್ಧಿಗಾಗಿ ತಪ್ಪದೇ ಜವಾಬ್ದಾರಿಯುತ ಯೋಜನೆಗಳನ್ನು ರೂಪಿಸಬೇಕು, ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವುಗಳನ್ನು ಯಶಸ್ವಿಯಾಗಿ ಮತ್ತು ಪಾರದರ್ಶಕವಾಗಿ ಜಾರಿಗೆ ತರಬೇಕು ಎಂದು ನಿರೀಕ್ಷಿಸುತ್ತೇವೆ ಮತ್ತು ಅದಕ್ಕಾಗಿ ಹಕ್ಕೊತ್ತಾಯ ಮಾಡುತ್ತೇವೆ. ಬದುಕನ್ನು ಕುರಿತ ನಿಲುವುಗಳಲ್ಲಿನ ಈ ರೀತಿಯ ವೈರುಧ್ಯ, ಬದುಕಿನ ಎಲ್ಲಾ ಮುಖಗಳಲ್ಲಿಯ ವೈರುದ್ಧ್ಯಗಳಿಗೆ ಕಾರಣೀಭೂತವಾಗಿದೆ.



**ಕೆಲವು ಪ್ರಮುಖ ದ್ವಂದ್ವಗಳು:** ಮೊಟ್ಟಮೊದಲಿಗೆ ವ್ಯಕ್ತಿ ಸಮಾಜಕ್ಕಿಂತ ಸಂಪೂರ್ಣವಾಗಿ ಭಿನ್ನ ಎಂದು ತಿಳಿಯುತ್ತೇವೆ. ವ್ಯಕ್ತಿಯನ್ನು ಸಮಾಜಕ್ಕೆ ಎದುರಾಗಿ ಒಂದರ್ಥದಲ್ಲಿ ವಿರೋಧಿ ನೆಲೆಯಲ್ಲಿ ಇರಿಸುತ್ತೇವೆ. ಸಮಾಜ ಕೇವಲ ತನ್ನ ಸದಸ್ಯರ ಹಿತಾಸಕ್ತಿಗೆ ಸಂಬಂಧಿಸಿದಂತೆ ಕರ್ತವ್ಯ ಜವಾಬ್ದಾರಿಗಳನ್ನು ಮಾತ್ರ ಹೊಂದಿರುವ ಸಂಸ್ಥೆ, ಅಷ್ಟೇ. ಸಮಾಜದ ಪ್ರತಿಯೊಬ್ಬ ಸದಸ್ಯನ ಹಿತವನ್ನು ಕಾಯುವ ಯೋಜನೆಗಳನ್ನು ಜಾರಿಗೆ ತರುವ ಜವಾಬ್ದಾರಿಯುತ ಸಾಮಾಜಿಕ-ಸ್ಥಾನದಲ್ಲಿರುವವರು ವ್ಯಕ್ತಿಯ ಜನ್ಮಸಿದ್ಧ ಹಕ್ಕುಗಳಂತಿರುವ ಬೇಡಿಕೆಗಳನ್ನು ಈಡೇರಿಸುವ ಸಾಧನ ಸಲಕರಣೆಗಳು ಮಾತ್ರ. ವ್ಯಕ್ತಿಯ ಜೀವನಗತಿ ಹೀಗೇ ಇರಬೇಕು, ಹಾಗೆ ಇರಲೇಬಾರದು ಎನ್ನುವ ಶರತ್ತುಗಳನ್ನು ವ್ಯಕ್ತಿಗೆ ವಿಧಿಸಲು ಅವರಿಗೆಯಾವ ಅಧಿಕಾರವೂ ಇಲ್ಲ ಎನ್ನುತ್ತೇವೆ. ಈ ರೀತಿಯ ದ್ವಂದ್ವರೂಪಿ ನಿಲುವು ವ್ಯಕ್ತಿಯ ಬೇಜವಾಬ್ದಾರಿ

ವರ್ತನೆಗೆ, ಜೊತೆಯವರಿಗೆ ತೋರುವ ಕ್ರೌರ್ಯಕ್ಕೆ ಜವಾಬ್ದಾರ ಆಗಿದೆ. ಇದು ಅಂತಿಮವಾಗಿ ಎಲ್ಲಾ ರೀತಿಯ ಭಯೋತ್ಪಾದಕತೆಗೆ, ನಿರಂಕುಶಾಧಿಕಾರಿತ್ವಕ್ಕೆ ಎಡೆಮಾಡಿಕೊಟ್ಟಿದೆ ಎಂಬುದು ಗಮನಾರ್ಹ.

ಎರಡನೆಯದಾಗಿ ಮತಧರ್ಮಕ್ಕಿಂತ ವಿಜ್ಞಾನ ಸಂಪೂರ್ಣವಾಗಿ ಭಿನ್ನ. ಮತಧರ್ಮದ ಕ್ಷೇತ್ರವೇ ಬೇರೆ, ವಿಜ್ಞಾನದ ಕ್ಷೇತ್ರವೇ ಬೇರೆ, ಅವು ಒಂದಕ್ಕೊಂದು ಪರಸ್ಪರ ಧ್ರುವವಿರೋಧಿ. ಮತ-ಧರ್ಮೀಯ ಆಚರಣೆಗಳನ್ನು ಇಟ್ಟುಕೊಂಡಿದ್ದರೂ ಬದುಕಿನ ಎಲ್ಲಾ ಕ್ಷೇತ್ರಗಳಲ್ಲಿ ಉನ್ನತಿ ಸಾಧ್ಯವಾಗಬೇಕಾದರೆ ಸಾರ್ವಜನಿಕವಾಗಿ ಮತ, ಧರ್ಮವನ್ನು ಅತ್ಯಾವಶ್ಯಕವಾಗಿ ದೂರವಿರಿಸಲೇಬೇಕು. ಮತ, ಧರ್ಮವು ಜನಸಾಮಾನ್ಯರ ಭೌತಿಕ, ಆರ್ಥಿಕ ಸೌಖ್ಯವನ್ನು ಸಾಧಿಸುವ ವೈಜ್ಞಾನಿಕ ಚಿಂತನೆಗೆ, ತಾಂತ್ರಿಕ ಪರಿಣತಿಗೆ ಬಹು ದೊಡ್ಡ ಅಡೆತಡೆ; ಅದು ಭೌತಿಕ ದೈಹಿಕ ಮನರಂಜನೆಗಳನ್ನು ವಿರೋಧಿಸುತ್ತದೆ, ನಿಷೇಧಿಸುತ್ತದೆ; ಮರಣದ ನಂತರ ಸ್ವರ್ಗದಲ್ಲಿಯೇ ಸ್ಥಾನ ದೊರೆಯಬೇಕು ಎಂದಾದರೆ ಭೌತಿಕ ಸುಖ ಸಮೃದ್ಧಿಗಳಿಗೆ, ಭೌತಿಕ ಭೋಗ ಸಾಧನಗಳಿಗೆ ವಿದಾಯ ಹೇಳಲೇಬೇಕು ಎಂದು ನಿರ್ಬಂಧಿಸುತ್ತದೆ; ಇಂಥ ಮತಧರ್ಮವನ್ನು ನಮ್ಮ ವೈಯಕ್ತಿಕ ಬದುಕಿನ ಎಲ್ಲಾ ಕ್ಷೇತ್ರಗಳಿಂದ ಗಡೀಪಾರು ಮಾಡಲೇಬೇಕು; ಇದೇ ಧರ್ಮನಿರಪೇಕ್ಷತಾ ಸಿದ್ಧಾಂತದ ತಿರುಳು. ಸ್ವರ್ಗಲೋಕಕ್ಕಾಗಿ ಕೆಲವೊಂದು ನಿರ್ದಿಷ್ಟ ಆಚಾರಗಳನ್ನು ಅನುಸರಿಸಿದರೆ ಸಾಕು ಎನ್ನುತ್ತೇವೆ. ಇಂತಹ ತೀರ್ಮಾನ ಇಂದ್ರಿಯ ಸುಖಭೋಗಗಳಿಗೆ ಪ್ರಾಶಸ್ತ್ಯ ನೀಡುವಂತೆ ಮಾಡಿದೆ, ವೈಯಕ್ತಿಕ ಜೀವನದಲ್ಲಿ ಅನೈತಿಕ ನಡಾವಳಿಗೆ ಮತ್ತು ಸಾರ್ವಜನಿಕ ಬದುಕಿನಲ್ಲಿ ಎಲ್ಲಾ ರೀತಿಯ ಭ್ರಷ್ಟತೆಗೆ ಎಡೆಮಾಡಿಕೊಟ್ಟಿದೆ. ಸುಸಂಬದ್ಧ ಹಾರ್ದಿಕ ಸಾಮಾಜಿಕ ಜೀವನವನ್ನು ನಡೆಸುವ ಸಾಧ್ಯತೆಗೆ ಗಂಭೀರವಾದ ಆಘಾತವನ್ನುಂಟುಮಾಡಿದೆ.

ಮೂರನೆಯದಾಗಿ ಭೌತಿಕ ಆವಶ್ಯಕತೆಗಳೇ ಬೇರೆ, ಆಧ್ಯಾತ್ಮಿಕ ತುರ್ತುಗಳೇ ಬೇರೆ, ಅವು ಒಂದಕ್ಕೊಂದು ಧ್ರುವವಿರೋಧಿ. ನಮ್ಮ ಜೀವನ ರೀತಿಯಲ್ಲಿ ವೈಚಾರಿಕತೆ ಇರುವುದು ಅತ್ಯಾವಶ್ಯಕ. ನಮ್ಮ ಸುತ್ತಲಿನ ಸಂಗತಿಗಳನ್ನು ಸುಖ ಸೌಕರ್ಯಗಳ ಸಮೃದ್ಧಿಗೆ ಕಾರಕವಾಗುವ ವೈಜ್ಞಾನಿಕ ದೃಷ್ಟಿಕೋನದಿಂದ ಪರಿಶೀಲಿಸಬೇಕು. ಅಂಧವಿಶ್ವಾಸ, ಮೌಢ್ಯ, ಅತಾರ್ಕಿಕತೆ, ಜಡ ಸಾಂಪ್ರದಾಯಿಕತೆ, ನಿಷ್ಕ್ರಿಯತೆ, ಬಡತನಗಳನ್ನು ಪೋಷಿಸುವ ತಾತ್ತ್ವಿಕತೆ, ಆಧ್ಯಾತ್ಮಿಕತೆ, ಸಂಪ್ರದಾಯ ಇವುಗಳ ಹಿಡಿತದಿಂದ ಪಾರಾಗಬೇಕು. ನಮ್ಮ ಶಿಕ್ಷಣದಲ್ಲಿ ಆಧ್ಯಾತ್ಮಿಕ, ತಾತ್ತ್ವಿಕ, ಸಾಂಪ್ರದಾಯಿಕ ದೃಷ್ಟಿಕೋನಗಳಿಗೆ ಸ್ಥಳಾವಕಾಶ ಇರಬಾರದು ಎಂದುಕೊಳ್ಳುತ್ತೇವೆ. ಸಂಪ್ರದಾಯ, ತಾತ್ತ್ವಿಕತೆ, ತಾರ್ಕಿಕತೆಗಳ ಅರ್ಥ ಮತ್ತು ಮಹತ್ವವನ್ನು ಅರ್ಥಮಾಡಿಕೊಳ್ಳಲು ನಿರಾಕರಿಸುವ ಈ ಮನಸ್ಥಿತಿ ಎಲ್ಲಾ ರೀತಿಯ ಮಾನಸಿಕ ಕುಸಿತಕ್ಕೆ, ಬದುಕನ್ನು ಕುರಿತ ನೇತ್ಯರ್ಥಕ ಧೋರಣೆಗಳಿಗೆ, ಆತ್ಮಹತ್ಯೆ, ಆತ್ಮಾಹುತಿ ದಾಳಿಯಂತಹ ಉನ್ಮಾದಗಳಿಗೆ, ರಕ್ತಪಾತಕ್ಕೆ ರಾಜಮಾರ್ಗವಾಗಿದೆ.

**ರೂಕ್ಷ ವ್ಯಕ್ತಿನಿಷ್ಠವಾದ:** ನಮ್ಮ ವೈಯಕ್ತಿಕ ವಿಶಿಷ್ಟತೆಯನ್ನು ನಾವು ನಮ್ಮ ಶ್ರೇಷ್ಠತೆಯ ಗರಿಮೆಯ ಅಹಂಭಾವವನ್ನಾಗಿಸಿಕೊಂಡಿದ್ದೇವೆ. ನಮ್ಮ ಹಿರಿಮೆ ಗರಿಮೆಯ ಭಾವನೆಗೆ ಆಧಾರವಿದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸುವ ಗೋಜಿಗೇ ಹೋಗುವುದಿಲ್ಲ. ಬದಲಿಗೆ ನಮ್ಮ ಅಹಂಕಾರದ ಪ್ರದರ್ಶನವನ್ನು ವ್ಯಕ್ತಿಗತ ನೆಲೆಯಿಂದ ಸಾರ್ವಜನಿಕ ನೆಲೆಗೆ ವಿಸ್ತರಿಸುತ್ತೇವೆ, ಅದೇ ಪರಮ ಸತ್ಯ ಎಂದು ಬಿಂಬಿಸುತ್ತೇವೆ. ಅದರ ಆಗುಹೋಗುಗಳನ್ನು ಗಮನಕ್ಕೆ ತಂದುಕೊಳ್ಳದೆಯೇ ನಮ್ಮ ಸತ್ಯಗ್ರಹಿಕೆಗೆ ಅನುಗುಣವಾಗಿ ನಮಗೆ ಇಷ್ಟ ಬಂದಂತೆ ವರ್ತಿಸುತ್ತೇವೆ. ಇಂಥ ಸತ್ಯ-ಗ್ರಹಿಕೆ-ನಿಲುವಿನಿಂದಾಗಿ ವ್ಯಕ್ತಿಗೆ ವಿರುದ್ಧವಾಗಿ ರಾಜಕೀಯ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ ಇದೆ ಎಂದು ತಿಳಿಯುವುದರ ಜೊತೆಗೆ ವ್ಯಕ್ತಿಗೆ ವಿರುದ್ಧವಾಗಿ ವ್ಯಕ್ತಿ ಇದ್ದಾನೆ ಎಂದೂ ತಿಳಿಯುತ್ತೇವೆ. ಇದರ ಮುಖ್ಯ ಪರಿಣಾಮ ವ್ಯಕ್ತಿ-ಪ್ರತ್ಯೇಕತಾವಾದ, ಜಾತೀಯತಾವಾದ, ವರ್ಗ-ಪ್ರತ್ಯೇಕತಾವಾದ, ಧಾರ್ಮಿಕ-ಪ್ರತ್ಯೇಕತಾವಾದಗಳೇ ಮೊದಲಾದ ಮೂಲಭೂತವಾದಗಳ ವಿಜೃಂಭಣೆ, ಬಹುಮುಖಿಯಾದ ದ್ವೇಷದ ವಾತಾವರಣ. ಇದು ಬದುಕಿಗೆ ಸ್ವಾಭಾವಿಕವಾಗಿ ಇರುವ ಸೌಂದರ್ಯವನ್ನು ಹಾಳು ಮಾಡುತ್ತಿದೆ; ಸರಳ ಬದುಕಿನ ಸಾಧ್ಯತೆಯನ್ನು ಮುರುಟಿಹಾಕುತ್ತಿದೆ; ಉದಾತ್ತವಾದ ಆಶಯದ ಬದುಕು ಸಾಧ್ಯವಾಗಿಸುವ ಸಾಮರಸ್ಯ, ಸೌಹಾರ್ದಭಾವಕ್ಕೆ, ಪರಸ್ಪರ ಕೈ ಕೈ ಕೂಡಿಸಿ ಉನ್ನತ ಮಟ್ಟವನ್ನು ತಲುಪುವ ಮನಸ್ಥಿತಿಗೆ ವಿಷವನ್ನು ಸೇರಿಸುತ್ತಿದೆ.

**ಪರಿಸರಾತ್ಮಕ ವಿಪತ್ತು:** ಪ್ರತಿಯೊಂದನ್ನೂ ಅದರದರ ದೃಷ್ಟಿಕೋನದಿಂದಲೇ ಗಮನಿಸುವ ಆತ್ಯಂತಿಕ ಪ್ರತ್ಯೇಕತಾ-ಗ್ರಹಿಕೆಯಿಂದಾಗಿ ಜೀವಿಗಳ ನಡುವೆ, ಅಜೀವಿಗಳ ನಡುವೆ, ಜೀವಿ ಅಜೀವಿಗಳ ನಡುವೆ, ವ್ಯಕ್ತಿ ವ್ಯಕ್ತಿಗಳ ನಡುವೆ ಇರುವ ಕೂಡು-ಸಂಬಂಧ, ಕೊಳು-ಕೊಡುಗೆಯ ಸಂಬಂಧವನ್ನು ಗ್ರಹಿಸಲಾರದೆ ಹೋಗಿದ್ದೇವೆ. ಇದರ ಮುಖ್ಯ ಪರಿಣಾಮ ಅತಿಯಾದ ಸ್ವಾರ್ಥ, ಸ್ವಕೇಂದ್ರಿತ ಲಾಭಾಕಾಂಕ್ಷೆ. ಇದರಿಂದಾಗಿ ನಾವು ಎದುರಿಸಬೇಕಾಗಿ ಬಂದಿರುವ ಅತ್ಯಂತ ಘೋರವಾದ ಪ್ರಾಕೃತಿಕ ವಿಪತ್ತಿಗೆ ನಿಚ್ಚಳ ಉದಾಹರಣೆ ಉತ್ತರಭಾರತದ ಕೇದಾರನಾಥದಲ್ಲಿ, ದಕ್ಷಿಣ ಭಾರತದ ಕೊಡಗಿನಲ್ಲಿ ನಮಗೆ ಒದಗಿ ಬಂದ ಘೋರ ದುರ್ದೆಶೆ. ಪ್ರಾಕೃತಿಕ ಮತ್ತು ಜೀವಸಹಜ ಸ್ವಭಾವ ಸ್ವರೂಪಾತ್ಮಕ ನಿಯಮಾತ್ಮಕತೆಯನ್ನು, ಬದ್ಧತೆಯನ್ನು, ಪಾರಸ್ಪರಿಕ ಸಾಮರಸ್ಯತೆ, ಹೊಂದಾಣಿಕೆಯನ್ನು ಕಂಡುಕೊಳ್ಳಲು ವಿಫಲರಾಗಿರುವುದೇ ನಮ್ಮೆಲ್ಲ ಪ್ರಾಕೃತಿಕ ದುರಂತಗಳಿಗೆ ಕಾರಣ.

**ಲೋಕಸಂಗ್ರಹ ಪರಿಕಲ್ಪನೆ:** ಸಾಧ್ಯವಾಗಬಹುದಾದ ಗರಿಷ್ಠ ಒಳಿತು ಮತ್ತು ಸುಖೀ ಬದುಕು ನಮ್ಮದಾಗಬೇಕು, ನಮ್ಮ ಪರಿಸರ ಮಾನವೀಯ ಆಗಬೇಕು, ನಮ್ಮದು ರಾಮರಾಜ್ಯವಾಗಬೇಕು ಎನ್ನುವುದು ನಮ್ಮ ಕನಸು, ನಮ್ಮ ನಿರೀಕ್ಷೆ, ನಮ್ಮ ಆದರ್ಶ. ನಮ್ಮ ಪ್ರಾಚೀನ ಚಿಂತಕರ ಲೋಕಸಂಗ್ರಹದ ಪರಿಕಲ್ಪನೆಯ ನೆಲೆಯಲ್ಲಿ ನಮ್ಮೆಲ್ಲ ಸಂಗತಿಗಳನ್ನು ಅರ್ಥಮಾಡಿಕೊಂಡಾಗ ನಮ್ಮ ಕನಸು ನನಸಾದೀತು, ನಮ್ಮ ನಿರೀಕ್ಷೆ ವಾಸ್ತವವಾದೀತು, ನಮ್ಮ ಆದರ್ಶ ಕೈಗೂಡೀತು. ಇದಕ್ಕೆ ವೇದ, ಭಗವದ್ಗೀತೆಗಳಲ್ಲಿಯ ಲೋಕ ಸಂಗ್ರಹ ಪರಿಕಲ್ಪನೆ ಸೂಕ್ತ ಪಥ, ಮಾರ್ಗದರ್ಶನ, ದಿಕ್ಸೂಚಿ. ಇದನ್ನು ಆಧರಿಸಿಯೇ ವಿವೇಕಾನಂದರ ಮನುಷ್ಯಕೇಂದ್ರಿತ ಆನ್ವಯಿಕ ತಾತ್ತ್ವಿಕತೆ ರೂಪುಗೊಂಡಿದೆ. (ಪ್ರಾಕ್ಟಿಕಲ್ ವೇದಾಂತ) ವೇದ ಎಲ್ಲೆಡೆಯಲ್ಲೂ

ಬೆಸೆಯುವ ವಿಶ್ವಾತ್ಮಕವಾದ ಸಾಮಾಜಿಕ ಕಲ್ಯಾಣಕಾರಕ ಹಿತಾಕಾಂಕ್ಷಿ ಮಾನವೀಯ ಮಧುರ ಬಾಂಧವ್ಯವನ್ನು (ಹೊನಲನ್ನು) ಲೋಕ ಸಂಗ್ರಹ ಎಂದು ಪರಿಕಲ್ಪಿಸುತ್ತದೆ. ಇದು ಮನುಷ್ಯ ಮತ್ತು ಇಡೀ ವಾಸ್ತವಿಕತೆಯ ನಡುವೆ ಇರುವ ಚೇತೋಹಾರಿ ಭಾವಬಂಧುರತೆಯನ್ನು ಎತ್ತಿಹಿಡಿಯುತ್ತದೆ. ಭಗವದ್ಗೀತೆಯ ಕೃಷ್ಣ ಈ ಪರಿಕಲ್ಪನೆಯನ್ನು ತನ್ನ ಅವತಾರದ ವಿಶಿಷ್ಟತೆಯನ್ನು ಅರ್ಜುನನಿಗೆ ವಿವರಿಸುವ ಸಂದರ್ಭದಲ್ಲಿ ತನ್ನದೇ ಆದ ರೀತಿಯಲ್ಲಿ ಇದನ್ನು ಗಮನಕ್ಕೆ ತರುತ್ತಾನೆ. ವೈಯಕ್ತಿಕ ಆತ್ಮವು ಇರುವುದೆಲ್ಲದರ ಅವಿಭಾಜ್ಯ ಅಂಗ ಎಂಬ ನೆಲೆಯಲ್ಲಿ ಸ್ವಕೇಂದ್ರಿತ ಆಶೋತ್ತರಗಳನ್ನು ಇಡೀ ವಾಸ್ತವಿಕತೆಯ ಕೇಂದ್ರದ ನೆಲೆಗೆ ವಿಸ್ತರಿಸುವುದೇ ಲೋಕಸಂಗ್ರಹ ಎಂಬುದರ ಅರ್ಥ.

**ವಿವೇಕಾನಂದರ ಮನುಷ್ಯಕೇಂದ್ರಿತ ಲೋಕಸಂಗ್ರಹ ಪರಿಕಲ್ಪನೆ ಮತ್ತು ಆನ್ವಯಿಕ ತಾತ್ತ್ವಿಕತೆ:** ವಿವೇಕಾನಂದರು ೧೯–೨೦ನೇ ಶತಮಾನದ ಶ್ರೇಷ್ಠ ತತ್ತ್ವಶಾಸ್ತ್ರಜ್ಞರಲ್ಲಿ ಪ್ರಮುಖರು. ಅವರ ಜೀವನದ ಮತ್ತು ಬೋಧನೆಯ ಕೇಂದ್ರಬಿಂದು ಮನುಷ್ಯನೇ. ಅವರ ಮನುಷ್ಯ, ಮನುಷ್ಯತ್ವ, ಮಾನವನಾಗಿ ರೂಪುಗೊಳ್ಳುವಿಕೆಯ ಪರಿಕಲ್ಪನೆಗಳು ಪ್ರಾಚ್ಯ–ಪಾಶ್ಚಾತ್ಯ ಎಂಬ ಭೇದವಿಲ್ಲದೆ ಎಲ್ಲೆಡೆ ಮಾನವ ಕಲ್ಯಾಣವನ್ನು ಸಾಧಿಸುವ ಆಶಯವುಳ್ಳದ್ದು. ಮನುಷ್ಯನಿಗೆ ತನ್ನ ಮಹತ್ವವನ್ನು, ಘನತೆಯನ್ನು ದೈವಿಕತೆಯ ಮಟ್ಟಕ್ಕೆ ಮೇಲಕ್ಕೆತ್ತುವ ಸಾಮರ್ಥ್ಯ ಇದೆ ಎನ್ನುವ ವಿಷಯದಲ್ಲಿ ಅವರಿಗೆ ನಂಬಿಕೆಯಿತ್ತು. ಎಲ್ಲರೂ ದೈವಾಂಶ ಸಂಭೂತರಾಗಿರುವುದರಿಂದಾಗಿ ಎಲ್ಲರೂ ಒಂದೇ, ಎಲ್ಲರೂ ಸಮಾನರು; ನಮ್ಮ ಗಮನಕ್ಕೆ ಬರುವ ಭಿನ್ನತೆಗಳು ಸಾಪೇಕ್ಷ ವಾಸ್ತವತೆ ಅಥವಾ ಭ್ರಮಾತ್ಮಕ ಗ್ರಹಿಕೆ ಎಂಬುದನ್ನು ವಿವೇಕಾನಂದರು ಮನಗಂಡಿದ್ದರು. ಅವರು ಆತ್ಯಂತಿಕ ಸತ್ಯದ ಏಕತ್ವವನ್ನು ಎತ್ತಿಹಿಡಿಯುವ, ಬದುಕಿನ ನೈಜ ಸಂತೋಷವನ್ನು ಹಾಳುಮಾಡುವ ಎಲ್ಲಾ ವಿಧದ ಪ್ರತ್ಯೇಕತೆಗಳನ್ನು ಸ್ಥಿರೀಕರಿಸುವ ದ್ವೈತತೆ ಮತ್ತು ಬಹುತ್ವದ ಸತ್ಯತೆಯನ್ನು ನಿರಾಕರಿಸುವ ಅದ್ವೈತದ ನಿಷ್ಠಾವಂತ ಅನುಯಾಯಿ ಆಗಿದ್ದರು. ಅವರ ತಾತ್ತ್ವಿಕತೆಯ ಆಧಾರಸೂತ್ರ ಅದ್ವೈತಾಗ್ರಣಿ ಶಂಕರಾಚಾರ್ಯರ '**ಅಹಂ ಬ್ರಹ್ಮಾಸ್ಮಿ**' ಎನ್ನುವ ನಿಲುವು. ಸುಂದರ ಬದುಕಿನ ಸಾಧ್ಯತೆಯನ್ನು ನಾಶಮಾಡುವ ಪ್ರತ್ಯೇಕತಾ ನಿಲುವಿನ ಮೌಲ್ಯವನ್ನು ನಿರಾಕರಿಸಬಯಸುವವರಿಗೆ, ಅಸ್ಪೃಶ್ಯತೆ, ಗುಲಾಮ ಪದ್ಧತಿಯೇ ಮುಂತಾದ ನೇತ್ಯರ್ಥಕ ಮನಸ್ಥಿತಿ ಮತ್ತು ನೇತ್ಯರ್ಥಕ ನಡಾವಳಿಗಳನ್ನು ಮೂಲೋತ್ಪಾಟನ ಮಾಡಲು ಆಶಿಸುವವರಿಗೆ ಇದೇ ಸೂಕ್ತ ಆರಂಭಬಿಂದು, ಮಾರ್ಗದರ್ಶಿಸೂತ್ರ, ಅತ್ಯಗತ್ಯವಾದ ಮಾನದಂಡ.

**ವಿವೇಕಾನಂದರ ಮಾನವತಾವಾದ:** ಮನುಷ್ಯಜೀವಿಯಾಗಿ ಮಾನವಮೌಲ್ಯಗಳನ್ನು ಒಳಗೊಳ್ಳುವ ಘನತೆಯ ಬದುಕನ್ನು ನಡೆಸಬಲ್ಲ ಸಾಮರ್ಥ್ಯ ವ್ಯಕ್ತಿಗೆ ಇರುವುದನ್ನು ವಿವೇಕಾನಂದರು ಅತಿಶಯವಾಗಿ ಎತ್ತಿಹಿಡಿಯುತ್ತಿದ್ದರು. ಮನುಷ್ಯತ್ವ ಎಂದರೆ ಅವನ ಸ್ವರೂಪಾತ್ಮಕ ದೈವಿಕತೆ; ಅರ್ಥಪೂರ್ಣ ಬದುಕು ಎಂದರೆ ಅವನ ಕ್ರಿಯಾ ಮತ್ತು ಆಲೋಚನಾ ಸ್ವಾತಂತ್ರ್ಯ ಹಾಗೂ ಬೌದ್ಧಿಕ ವಿಕಸನವುಳ್ಳ ಜೀವನಕ್ರಮ ಎನ್ನುತ್ತಿದ್ದರು. ಅವೇ ವಾಸ್ತವಿಕವಾಗಿ ಒಬ್ಬನ ವೈಯಕ್ತಿಕ ವಿಶಿಷ್ಟತೆ ಎಂದು ಗುರುತಿಸಿದ್ದರು. ನಮ್ಮ ವೈಚಾರಿಕ ಸಾಮರ್ಥ್ಯ ದೇವರು ನಮಗಾಗಿ ಕೊಟ್ಟ ಅಮೂಲ್ಯವಾದ ಕೊಡುಗೆ, ಅದನ್ನು ಬಳಸಿ ಮೌಢ್ಯದ ಅಂಧಕಾರದಿಂದಾಚೆಗೆ ಬರುವುದು ನಮ್ಮ ಜವಾಬ್ದಾರಿ; ಅದನ್ನು ಮರ್ಯಾದಿಸದಿದ್ದರೆ ದೇವರು ನಮ್ಮನ್ನು ಖಂಡಿತವಾಗಿ ಕ್ಷಮಿಸುವುದಿಲ್ಲ ; ವಾಸ್ತವವಾಗಿ ಈ ದೈವೀ ಕೊಡುಗೆಯನ್ನು ಬಳಸಲು ನಿರಾಕರಿಸುವ ಹಕ್ಕು ನಮಗಿಲ್ಲ ; ಹಾಗೂ ಉನ್ಮಾದಿತರಂತೆ ಮನಷ್ಯತ್ವರಹಿತ ಜಿಗುಟುತನದ ಬದುಕನ್ನು ನಡೆಸುವ ಅಧಿಕಾರವೂ ನಮಗಿಲ್ಲ ಎಂದು ಖಡಾಖಂಡಿತವಾಗಿ ಹೇಳುತ್ತಿದ್ದರು.

ವ್ಯಕ್ತಿ ತನ್ನನ್ನು ಕುರಿತು ಏನು ಭಾವಿಸಿಕೊಳ್ಳುತ್ತಾನೆಯೋ ಹಾಗೆ ಅವನು ತನ್ನನ್ನು ರೂಪಿಸಿಕೊಳ್ಳುತ್ತಾನೆ, ಅದೇ ರೀತಿ ತನ್ನ ನಡೆನುಡಿಗಳನ್ನು ಹೊಂದಿರುತ್ತಾನೆ. ದಯೆ, ಕರುಣೆ, ಅನುಕಂಪೆ, ಪ್ರೀತಿ, ವೈಚಾರಿಕತೆ, ಸಹಭಾಗಿತ್ವದ ಪ್ರಜ್ಞೆಯೇ ಮೊದಲಾದ ದೈವಿಕ ಲಕ್ಷಣಗಳುಳ್ಳವನು ತಾನು ಎಂದು ಅವನು ತನ್ನನ್ನು ಅರ್ಥ ಮಾಡಿಕೊಂಡರೆ, ಖಂಡಿತವಾಗಿ ಅವನು ಸಕಲ ಜೀವ ಅಜೀವಗಳ ಹಿತಾಸಕ್ತಿಯನ್ನು ಭಾವಿಸುತ್ತಾನೆ, ಚಿಂತಿಸುತ್ತಾನೆ ಮತ್ತು ಅದರಂತೆ ಕಾರ್ಯೋನ್ಮುಖನಾಗುತ್ತಾನೆ ಎಂಬುದನ್ನು ಅವರು ಮನವರಿಕೆ ಮಾಡಿಕೊಂಡಿದ್ದರು. ಹೀಗೆ ಜಾಗೃತನಾದವನು ನಿಶ್ಚಯವಾಗಿ ಪ್ರತಿಯೊಬ್ಬ ವ್ಯಕ್ತಿಯೂ, ಪ್ರತಿಯೊಂದು ಜೀವಿಯೂ, ಹಾಗೆಯೇ ಪ್ರತಿಯೊಂದು ಜೀವವೂ ತಮ್ಮ ತಮ್ಮದೇ ಆದ ರೀತಿಯಲ್ಲಿ ಗೌರವಾರ್ಹ ಎಂಬುದನ್ನು ಮನಗಂಡಿರುತ್ತಾನೆ; ಯಾವುದೇ ಕಾರಣಕ್ಕೂ ಯಾವುದೇ ರೀತಿಯ ದ್ವೇಷ, ಅನ್ಯಾಯ, ಭ್ರಷ್ಟತೆ, ಅಪಮೌಲ್ಯೀಕರಣ, ಶೋಷಣೆಯೇ ಮೊದಲಾದ ನೇತ್ಯರ್ಥಕ ನಡಾವಳಿಗೆ ಅವಕಾಶ ಕೊಡುವುದಿಲ್ಲ ಎಂಬುದನ್ನು ಎಲ್ಲರಿಗೂ ಎಲ್ಲೆಡೆ ಸಾರಿ ಹೇಳಿದರು.

ಅವಕಾಶವುಳ್ಳವರು ಮತ್ತು ಅವಕಾಶವಂಚಿತರು, ಶ್ರೀಮಂತರು ಮತ್ತು ಬಡವರು, ಧಾರ್ಮಿಕತೆ ಮತ್ತು ಧರ್ಮನಿರಪೇಕ್ಷತೆ, ಆಧ್ಯಾತ್ಮಿಕತೆ ಮತ್ತು ಪ್ರಾಪಂಚಿಕತೆ, ವಿಚಾರ ಮತ್ತು ನಂಬಿಕೆಗಳ ನಡುವಿನ ಅಂತರವನ್ನು ನಿವಾರಿಸುವ ಉದ್ದೇಶ ವಿವೇಕಾನಂದರಿಗಿತ್ತು. ಆತ್ಯಂತಿಕ ಇರುವಿಕೆಯಲ್ಲಿ ಇಂತಹ ಅಂತರಗಳಿಗೆ ವಾಸ್ತವಿಕವಾಗಿ ಅವಕಾಶವಿಲ್ಲ, ಇರುವವರೆಲ್ಲರೂ ಮತ್ತು ಇರುವವುಗಳೆಲ್ಲವೂ ಅಮೃತತತ್ತ್ವದ ಬಹುರೂಪಿಗಳು (**ಅಮೃತಸ್ಯ ಪುತ್ರಾಃ**) ಆಗಿರುವುದರಿಂದ ಎಲ್ಲರ ಮತ್ತು ಎಲ್ಲವುಗಳ ನಡುವೆ ಸೋದರತ್ವ ಸಮಾನತೆಯ ಬಾಂಧವ್ಯವನ್ನು ಸ್ಥಾಪಿಸಿಕೊಳ್ಳುವುದು ಎಲ್ಲರ ಕರ್ತವ್ಯ, ಜವಾಬ್ದಾರಿ ಎಂದು ಅವರು ತಿಳಿದಿದ್ದರು. ಅಂಥ ಜಾಗೃತಿಯನ್ನು ಎಲ್ಲರಲ್ಲಿಯೂ ಮೂಡಿಸಬಯಸಿದರು. ನಾವು ಪ್ರಜಾಸತ್ತಾತ್ಮಕತೆಯನ್ನು ಆಯ್ಕೆ ಮಾಡಿಕೊಂಡಿರುವುದರಿಂದ ವಿವೇಕಾನಂದರ ಈ ಉದ್ದೇಶ ಮತ್ತು ಗ್ರಹಿಕೆ ನಮ್ಮೆಲ್ಲರ ಉದ್ದೇಶ ಮತ್ತು ಗುರಿಯಾಗುವುದು ಸಹಜವೇ ಆಗುತ್ತದೆ.

**ವಿವೇಕಾನಂದರ ಸಮಗ್ರತಾ ಆಧ್ಯಾತ್ಮಿಕ ಸಿದ್ಧಾಂತ:** ವಿವೇಕಾನಂದರದು ವ್ಯಕ್ತಿಯ ಆತ್ಮತತ್ತ್ವವನ್ನು ಇಡೀ ವಿಶ್ವವನ್ನು ಒಳಗೊಳ್ಳುವಂತೆ ವಿಸ್ತರಿಸಿಕೊಳ್ಳುವ ಸಮಗ್ರತಾ ಆಧ್ಯಾತ್ಮಿಕತೆ. ಪ್ರತಿಯೊಬ್ಬನೂ ಶರತ್ತುರಹಿತವಾಗಿ ಎಲ್ಲ ಚರಾಚರಗಳ ಅರ್ಥಪೂರ್ಣ ಇರುವಿಕೆಯನ್ನು ಮರ್ಯಾದಿಸುವ ಸೃಜನಶೀಲ ಶಕ್ತಿಕೇಂದ್ರ ಆಗಬೇಕು ಎಂಬುದು

ಅವರ ಆಶಯ. ಅವರ ಆಧ್ಯಾತ್ಮಿಕತೆಯ ಸಾರಭೂತ ತತ್ತ್ವ - **ತತ್ ತ್ವಂ ಅಸಿ,** ಅದು ನೀನೇ ಆಗಿದ್ದೀಯೆ; ಸ್ವಹಿತಾಸಕ್ತಿಯನ್ನು ಇಡೀ ವಾಸ್ತವತೆಯ ಹಿತಾಸಕ್ತಿಯಾಗಿ ರೂಪಾಂತರಿಸಿಕೊಂಡರೆ ನಮ್ಮದು ಸಮಗ್ರತಾ ಆಧ್ಯಾತ್ಮಿಕತೆಯೇ; ಇದಕ್ಕೆ ಅತ್ಯಗತ್ಯವಾದ ಸಾಧನಾ ತಂತ್ರ ಮಾನವಸೇವೆ. ದುರ್ಬಲರಿಗೆ ಮಾಡುವ ಸೇವೆಯೇ ನಿಜವಾದ ದೇವರ ಸೇವೆ - ಎನ್ನುವುದಾಗಿತ್ತು.

ವಿವೇಕಾನಂದರ ಸಮಗ್ರತಾ ಆಧ್ಯಾತ್ಮಿಕತಾ ಸಿದ್ಧಾಂತವು ಮನುಷ್ಯನ ಅರಿವು ಪರಿಶುದ್ಧ ಪ್ರೀತಿ, ಶಾಂತಿ, ನಿರ್ಭಯತೆಗಳ ಸ್ವಾಭಾವಿಕ ಉದ್ಭೂತ ಚಿಲುಮೆಯಾಗುವ ದೈವಿಕ ಆಯಾಮವನ್ನು ಪಡೆಯುವುದಕ್ಕೆ ಹಾಗೂ ಶೋಷಿತರ, ತುಳಿತಕ್ಕೆ ಒಳಗಾದವರ ಮತ್ತು ದುಃಖಿತರ ಸ್ವಾತಂತ್ರ್ಯ ಸಮಾನತೆಗಾಗಿ ಕಾರ್ಯನಿರತ ಆಗುವುದಕ್ಕೆ ಸಂಬಂಧಿಸಿದುದು. ಅದು ಮನುಷ್ಯನನ್ನು ಅವನ ವಿಸ್ತೃತ ಸಮಾಜದೊಂದಿಗೆ ಸಮೀಕರಿಸುತ್ತದೆ; ಸಶಕ್ತ ದೇಶವನ್ನು ಕಟ್ಟಬಯಸುತ್ತದೆ, ಸಶಕ್ತ ಪ್ರಜೆಯನ್ನು ರೂಪಿಸಬಯಸುತ್ತದೆ. ಇದನ್ನು ವಿವೇಕಾನಂದರು ಮನುಷ್ಯನಾಗಿ ರೂಪುಗೊಳ್ಳುವಿಕೆ ಎಂದು ಅರ್ಥೈಸುತ್ತಾರೆ.

**ಮನುಷ್ಯನಾಗಿ ರೂಪುಗೊಳ್ಳುವಿಕೆ:** ವಿವೇಕಾನಂದರಿಗೆ ವ್ಯಕ್ತಿಯೊಬ್ಬ ತಾನೊಂದು ದೇಶದ, ಸಮಾಜದ ಜವಾಬ್ದಾರಿಯುತ ಪ್ರಜೆ, ಸದಸ್ಯ ಎಂದು ಪರಿಗಣಿಸಿಕೊಳ್ಳುವುದು ಅತ್ಯಾವಶ್ಯಕ. ವ್ಯಕ್ತಿಯೊಬ್ಬ ತನ್ನನ್ನು ಯಾವುದಾದರೊಂದು ದೇಶದ ಪ್ರಜೆಯಾಗಿ ಸಮಾಜದ ಸದಸ್ಯನಾಗಿ ಅಧಿಕೃತವಾಗಿ ಗುರುತಿಸಿಕೊಂಡ ಹೊರತೂ ಅವನ ಸರ್ವತೋಮುಖ ಕಲ್ಯಾಣಕ್ಕಾಗಿ ಯಾವುದೇ ಕಾರ್ಯಯೋಜನೆಯ ಫಲವನ್ನು ಅವನಿಗೆ ತಲುಪಿಸುವ ಜವಾಬ್ದಾರಿ ದೇಶದ್ದಾಗಲೀ ಸಮಾಜದ್ದಾಗಲೀ ಆಗುವುದಿಲ್ಲ. ವ್ಯಕ್ತಿ ಮತ್ತು ದೇಶ, ವ್ಯಕ್ತಿ ಮತ್ತು ಸಮಾಜ ಪರಸ್ಪರ ಪೂರಕ; ತನ್ನ ಪ್ರಜೆಗಳಿಗೆ ಸಂಬಂಧಿಸಿದಂತೆ ದೇಶಕ್ಕೆ, ತನ್ನ ಸದಸ್ಯರಿಗೆ ಸಂಬಂಧಿಸಿದಂತೆ ಸಮಾಜಕ್ಕೆ ಕರ್ತವ್ಯ ಹೊಣೆಗಾರಿಕೆಗಳು ಇದ್ದ ಹಾಗೆ ವ್ಯಕ್ತಿಗೂ ಅವನ ದೇಶಕ್ಕೆ, ಸಮಾಜಕ್ಕೆ ಸಂಬಂಧಿಸಿದಂತೆ ಇವೆ ಎಂಬುದನ್ನು ಗಮನಿಸಲೇಬೇಕು. ಆ ನೆಲೆಯಲ್ಲಿಯೇ ವ್ಯಕ್ತಿ ಮತ್ತು ದೇಶ, ವ್ಯಕ್ತಿ ಮತ್ತು ಸಮಾಜ, ವ್ಯಕ್ತಿ ಮತ್ತು ವಿಶ್ವಗಳ ನಡುವಿನ ಜವಾಬ್ದಾರಿಯುತ ಸಂಬಂಧವನ್ನು ವ್ಯಕ್ತಿ ವಿಸ್ತರಿಸಬೇಕು. ಯಾವುದೇ ಚೌಕಟ್ಟಿನ, ಯಾವುದೇ ರೂಪದ ಕರ್ತವ್ಯ, ಜವಾಬ್ದಾರಿ, ಹೊಣೆಗಾರಿಕೆಗಳು ಸ್ವರೂಪಾತ್ಮಕವಾಗಿ ದೈವಿಕತೆಯ ಮೂಲವುಳ್ಳದ್ದು. ಅವು ಅತ್ಯಾವಶ್ಯಕವಾಗಿ ಪ್ರೀತಿ ಸ್ನೇಹಯುತ ಬಾಂಧವ್ಯವನ್ನು ಬೆಸೆಯುತ್ತವೆ. ಮೂಢನಂಬಿಕೆಗಳ ಜಾಗದಲ್ಲಿ ವೈಚಾರಿಕ ಬದ್ಧತೆಯನ್ನೇ ಪ್ರತಿಷ್ಠಾಪಿಸುತ್ತವೆ. ಧಾರ್ಮಿಕ ಸಜ್ಜನಿಕೆಯ ಪರಿಸರವನ್ನೇ ಅಂತರಂಗ ಬಹಿರಂಗಗಳಲ್ಲಿ ಕಟ್ಟಿಕೊಡುತ್ತವೆ. ಸೇವಾ ಮನೋಭಾವ, ಪಾರಸ್ಪರಿಕ ಸಹಕಾರ, ಸಹೃದಯ ಕಾಳಜಿಗಳೊಂದಿಗೆ ವೈಯಕ್ತಿಕ ಹಿತಾಸಕ್ತಿಯನ್ನು ಸಾಮುದಾಯಿಕ ಹಿತಾಸಕ್ತಿಯನ್ನಾಗಿಸುವ ಮೌಲ್ಯವುಳ್ಳದ್ದು. ಬದುಕು ಬಿಡಿ ಬಿಡಿಯಾಗಿರುವ ಸಂಗತಿಗಳನ್ನಾಗಲೀ ಚರಾಚರಗಳನ್ನಾಗಲೀ ಒಳಗೊಂಡದ್ದು ಅಲ್ಲ, ವ್ಯಕ್ತಿ ಏಕಕಾಲದಲ್ಲಿ ಸಾಧ್ಯವೂ ಹೌದು, ಸಾಧನವೂ ಹೌದು ಎಂಬ ಅರಿವನ್ನು ಆಧರಿಸಿದೆ ಎನ್ನುತ್ತಾರೆ ವಿವೇಕಾನಂದರು. ಇದು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಸಾರ್ವಕಾಲಿಕ ಸತ್ಯವೂ ಹೌದು.

**ಸಮಾಜಸೇವೆ:** ವ್ಯಕ್ತಿ ವ್ಯಕ್ತಿಗಳ ನಡುವಿನ ಸಂಬಂಧ, ವ್ಯಕ್ತಿ ಮತ್ತು ಸಮಾಜ, ವ್ಯಕ್ತಿ ಮತ್ತು ದೇಶ (ರಾಜಕೀಯ ವ್ಯವಸ್ಥೆ), ವ್ಯಕ್ತಿ ಮತ್ತು ವಿಶ್ವ, ವ್ಯಕ್ತಿ ಮತ್ತು ಪರಿಸರಗಳ ನಡುವಿನ ಸಂಬಂಧ ಮೂಲಭೂತವಾಗಿ ಸೇವೆಯೇ ಆಗಿದೆ. ವ್ಯಕ್ತಿತ್ವದ ಹಿರಿಮೆಯನ್ನು ಉನ್ನತೀಕರಿಸುವ ಸಾಮಾಜಿಕ ಪ್ರಜ್ಞೆ ಮತ್ತು ಆಧ್ಯಾತ್ಮಿಕ ತಿಳುವಳಿಕೆಗಳ ನೆಲೆಯಲ್ಲಿ ಸೇವೆ ಮಾಡುವವರ ಮತ್ತು ಸೇವೆಯನ್ನು ಪಡೆಯುವವರ - ಇಬ್ಬರ ಘನತೆಗೆ ಮರ್ಯಾದೆಗೆ ಕುಂದನ್ನುಂಟು ಮಾಡದಂತೆ ಮಾಡುವ ಸೇವೆಯೇ ನಿಜವಾದ ಸಮಾಜಸೇವೆ ಎನ್ನುತ್ತಾರೆ ವಿವೇಕಾನಂದರು. ವಸ್ತುಗಳ ಮೂಲಕ ಒದಗಿಸುವ ಸೇವೆ ಭೌತಿಕ ಸುಖ ಸೌಕರ್ಯಗಳನ್ನು ಒದಗಿಸುತ್ತದೆ ಎಂಬುದು ನಿಜವಾದರೂ ಅಂತಹ ಸೇವೆ ಮಾನಸಿಕ ನೆಮ್ಮದಿಯನ್ನು ಕೆಡಿಸುವ ಪ್ರತ್ಯೇಕೀಕರಣ, ದೂರಸರಿಸುವಿಕೆ, ಭೇದಭಾವ, ಪಕ್ಷಪಾತ, ಜುಗುಪ್ಸೆಗಳಂತಹ ರೋಗಗಳಿಗೆ ಪರಿಹಾರವಾಗಲಾರದು; ಮಾನಸಿಕ ದುಗುಡ ದುಮ್ಮಾನಗಳಂತಹ ಒತ್ತಡ, ನೋವುಗಳನ್ನು ನಿವಾರಿಸಲಾರದು. ಮನುಷ್ಯರ ದುಃಖವನ್ನು ಅದು ಹಾಗೆಯೇ ಉಳಿಸಿಬಿಡುತ್ತದೆ. ಬದಲಿಗೆ ಎಲ್ಲರಲ್ಲೂ ಎಲ್ಲದರಲ್ಲೂ ದೈವಿಕತೆಯನ್ನು ಗುರುತಿಸಿ ಪ್ರೀತಿ, ಸ್ನೇಹ, ಸಹಕಾರ, ಸೌಹಾರ್ದತೆಗಳ ಸಹಾಯ ಹಸ್ತ ಚಾಚಿದರೆ ನಲಿವಿನ ಪರಿಸರ ಸಹಜವಾಗಿ ನಿರ್ಮಾಣವಾಗುತ್ತದೆ, ದುಃಖದ ಭಾವ ಇಲ್ಲವಾಗುತ್ತದೆ. ಅಹಂಕಾರ ದುರಾಸೆಗಳ ಜಾಗದಲ್ಲಿ ಇರುವುದೆಲ್ಲವನ್ನೂ ಆತ್ಯಂತಿಕ ಇರುವಿಕೆಯ ಪ್ರಸಾದ ಎಂದು ಅನುಭವಿಸುವ (**ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯ ಸ್ವಿದ್ಧನಂ**) ವಿನಯ ಕೃತಜ್ಞತೆ ನಮ್ಮದಾಗುತ್ತದೆ. ಸೇವಾ ಮನೋಭಾವನೆ ಉಂಟುಮಾಡಬೇಕಾದ ಆಧ್ಯಾತ್ಮಿಕತೆ ಇದೇ; ಇದನ್ನು ಸಾಧ್ಯಗೊಳಿಸುವ ಶಿಕ್ಷಣ ಎಲ್ಲರಿಗೂ ದೊರೆಯಬೇಕು ಎನ್ನುತ್ತಾರೆ ವಿವೇಕಾನಂದರು.

**ಶಿಕ್ಷಣ:** ವಿವೇಕಾನಂದರ ಪ್ರಕಾರ ವ್ಯಕ್ತಿಯನ್ನು ಮನುಷ್ಯನನ್ನಾಗಿಸುವ ಶಿಕ್ಷಣವು ವೃದ್ಧಿಶೀಲ ಮನೋದಾರ್ಢ್ಯ, ತೀಕ್ಷ್ಣವಾಗಿ ಚುರುಕುಗೊಳ್ಳುತ್ತ ಹೋಗುವ ಜಾಣ್ಮೆ ಬುದ್ಧಿವಂತಿಕೆ, ಎಲ್ಲವನ್ನೂ ಎಲ್ಲರನ್ನೂ ಒಳಗೊಳ್ಳುವ ಸ್ವತಂತ್ರ ಆರೋಗ್ಯವಂತ ಮನಸ್ಥಿತಿಗಳನ್ನು ಒಳಗೊಳ್ಳುವ ಉತ್ತಮ ಚಾರಿತ್ರ್ಯ-ನಿರ್ಮಾಣ-ಪ್ರಕ್ರಿಯೆ ಆಗಿದೆ. ಅಂಥ ಶಿಕ್ಷಣ ಎಲ್ಲದರಲ್ಲೂ ಎಲ್ಲರಲ್ಲೂ ವ್ಯಾಪ್ತವಾಗಿರುವ ಸತ್ ಚಿತ್ ಆನಂದ ಸ್ವರೂಪಿ ಆತ್ಯಂತಿಕ ಪರಿಪೂರ್ಣತೆಯನ್ನು ಕಂಡುಕೊಳ್ಳಲು ಅತಿ ಹೆಚ್ಚು ಸಹಕಾರಿ. ಅಹಂಕಾರ ಮತ್ತು ಅದರಿಂದ ಒದಗಿ ಬರುವ ಮಿಥ್ಯಾಜ್ಞಾನ ಹಾಗೂ ಅಜ್ಞಾನಗಳನ್ನು ಅದು ಮಾತ್ರ ತೊಡೆದುಹಾಕುತ್ತದೆ; ದೈವಿಕತೆಯ ಹೊರತಾಗಿ ಉದಾತ್ತವಲ್ಲದ ಯಾವುದರೊಂದಿಗೂ ನಮ್ಮನ್ನು ಗಂಟುಹಾಕಿಕೊಳ್ಳದಂತೆ ನಮ್ಮನ್ನು ತಡೆಯುತ್ತದೆ. ಪೌರುಷವನ್ನು ಸಜ್ಜನಿಕೆಯೊಂದಿಗೆ, ವಿಜ್ಞಾನ ತಂತ್ರಜ್ಞಾನಗಳನ್ನು ಧಾರ್ಮಿಕತೆಯೊಂದಿಗೆ ಸಮನ್ವಯಿಸುತ್ತದೆ. ಅರ್ಥರಹಿತ ಆಚಾರ ಸಂಹಿತೆ, ಮಾಯಾಮಂತ್ರಗಳಲ್ಲಿಯ ನಂಬಿಕೆ, ಭ್ರಮಾತ್ಮಕತೆಗಳ ಹಿಡಿತಗಳಿಂದ ಪಾರುಮಾಡುತ್ತದೆ. ದೈಹಿಕ, ಮಾನಸಿಕ, ಆಧ್ಯಾತ್ಮಿಕ ಶಕ್ತಿ, ಸಾಮರ್ಥ್ಯಗಳನ್ನು ವೃದ್ಧಿಸುತ್ತದೆ. ಹಾಗೂ ಅರ್ಥಪೂರ್ಣ ಬದುಕುವಿಕೆಗಾಗಿ ಮತ್ತು ಎಲ್ಲರ ಹಿತಕ್ಕಾಗಿ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಬಳಸುವಂತೆ ಪ್ರೇರೇಪಿಸುತ್ತದೆ.

ವಿವೇಕಾನಂದರು ಪರಿಕಲ್ಪಿಸುವ ಶಿಕ್ಷಣಕ್ರಮದ ಉದ್ದೇಶ ಸಹಜವಾಗಿ ವಿಷಯ ಸಂಗ್ರಹಣೆ ಅಲ್ಲ; ಬದಲಿಗೆ ಪರಮ ಸತ್ಯ ಅದ್ವೈತ ಎಂಬುದನ್ನು ಮನಗಾಣುವುದು, ನಿಷ್ಕಲ್ಮಷ ಪ್ರೀತಿ ಸ್ನೇಹಗಳ ಮೇಲೆ ವಿಶ್ವಾಸವಿಟ್ಟು ಸೇವಾಮನೋಭಾವದ ಬದುಕನ್ನು ನಡೆಸುವ ತರಬೇತಿ ಪಡೆಯುವುದು. ಇದಕ್ಕೆ ಪೂರಕವಾದದ್ದು ಬ್ರಹ್ಮಚರ್ಯೆ. ನೈಜ ಶಿಕ್ಷಣದ ಆಧಾರಸ್ತಂಭ ಬ್ರಹ್ಮಚರ್ಯೆಯೇ. ಬ್ರಹ್ಮಚರ್ಯೆಯು ಮನುಷ್ಯನ ಪ್ರವೃತ್ತಿಗಳನ್ನು ಸಮರಸಗೊಳಿಸುವ ಆತ್ಮಸಂಯಮವನ್ನು ಸಾಧಿಸುವ ಅಭ್ಯಾಸಕ್ಕೆ ಸಂಬಂಧಿಸಿದುದು. ನಿಜ-ಶಿಕ್ಷಣವನ್ನು ಪಡೆಯಲು ಸಮರ್ಥ ಸಾಧನ ಎಂದು ಧ್ಯಾನಕ್ಕೆ ವಿವೇಕಾನಂದರು ಶಿಕ್ಷಣಕ್ರಮದಲ್ಲಿ ವಿಶೇಷ ಸ್ಥಾನವನ್ನು ಕೊಡುತ್ತಾರೆ. ಚರಾಚರ ಜೀವಿಗಳೆಲ್ಲವೂ ಒಂದು ಸೂತ್ರಕ್ಕೆ ಒಳಪಟ್ಟಿದೆ ಎಂಬ ಸತ್ಯದರ್ಶನಕ್ಕಾಗಿ ತೀವ್ರವಾಗಿ ಹಂಬಲಿಸುವ ಮನಸ್ಥಿತಿಯೇ ಧ್ಯಾನ.

ದೃಢಕಾಯದಲ್ಲಿ ದೃಢಮನಸ್ಸು ಇರುತ್ತದೆ ಎನ್ನುವುದನ್ನು ವಿವೇಕಾನಂದರು ಒಪ್ಪಿಕೊಳ್ಳುತ್ತಾರೆ. ಸ್ವಾರ್ಥ, ಸಂಕುಚಿತ ಮನೋಭಾವ, ದ್ವೇಷ ಮತ್ತಿತರ ಸಣ್ಣತನಗಳಿಗೆ, ಬಗೆ ಬಗೆಯ ದುಃಖಗಳಿಗೆ ಮೂಲ ಆಗರ ದುರ್ಬಲ ಶರೀರ; ಆದ್ದರಿಂದ ನೈಜ ಶಿಕ್ಷಣಕ್ರಮದಲ್ಲಿ ದೈಹಿಕ ಸಶಕ್ತತೆಗೂ ಪ್ರಾಮುಖ್ಯತೆ ಇರಲೇಬೇಕು ಎನ್ನುತ್ತಾರೆ ವಿವೇಕಾನಂದರು. ವ್ಯಕ್ತಿಯ ದೈಹಿಕ ಪಟುತ್ವ ಮತ್ತು ದೇಶದ ಬಾಹುಬಲಗಳು ವ್ಯಕ್ತಿಯ ಮತ್ತು ದೇಶಗಳೆರಡರ ಸಶಕ್ತ ನಿರ್ಭಯ ವ್ಯಕ್ತಿತ್ವದ ಮುಖ್ಯಲಕ್ಷಣ. ಶರತ್ತುರಹಿತ ನಿರ್ವ್ಯಾಜ ಪ್ರೀತಿ, ಸ್ನೇಹ, ಸಾಮರಸ್ಯತೆ ಆತ್ಮೀಯ ಅನುಕಂಪೆ, ಸಹಾನುಭೂತಿಗಳನ್ನು ತೋರುವ ವ್ಯಕ್ತಿತ್ವವೇ ನಿರ್ಭಯತೆಯ ಪ್ರತೀಕ. ಇಂತಹ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾ ಅಂತಿಮವಾಗಿ ನಿರ್ಭಯ ಮನುಷ್ಯನಾಗಿ ಶಿಕ್ಷಣ ಸಂಸ್ಥೆಯಿಂದ ಶಿಕ್ಷಣದ ಅಂತ್ಯದಲ್ಲಿ ಹೊರಬರುವುದು ನೈಜ ಶಿಕ್ಷಣದ ಅಂತಿಮ ಗುರಿ, ಧ್ಯೇಯ ಎನ್ನುತ್ತಾರೆ ವಿವೇಕಾನಂದರು.

**ವಿವೇಕಾನಂದರ ಚಿಂತನೆಯ ಮೌಲ್ಯ:** ವಿವೇಕಾನಂದರ ಚಿಂತನೆ ರಾಷ್ಟ್ರೀಯವೂ ಹೌದು ರಾಷ್ಟ್ರಾತೀತವೂ ಹೌದು. ಭಾರತದಲ್ಲಿ ಅದ್ವೈತ ಸಿದ್ಧಾಂತದ ನೆಲೆಯಲ್ಲಿ ಏಕರಾಷ್ಟ್ರೀಯರು ನಾವು ಎಂಬುದನ್ನು ಎತ್ತಿಹಿಡಿದು ಬ್ರಿಟಿಷರ ಆಡಳಿತದಲ್ಲಿ ನಲುಗಿ ಹೋಗಿದ್ದ ಭಾರತೀಯರಲ್ಲಿ ಭಾರತೀಯತೆಯ ಸಮರ್ಥನೆಗಾಗಿ ಹೋರಾಡುವ ಕೆಚ್ಚನ್ನು ಮೂಡಿಸಿದ ರಾಷ್ಟ್ರವಾದಿಗಳು, ರಾಷ್ಟ್ರಾಭಿಮಾನಿಗಳು ವಿವೇಕಾನಂದರು. ಭೂಲೋಕದ ಬದುಕನ್ನು ಸ್ವರ್ಗೀಯವಾಗಿಸಲು ವಿಶ್ವದಲ್ಲಿರುವವರೆಲ್ಲರೂ ಆಧ್ಯಾತ್ಮಿಕವಾಗಿ ಒಂದೇ, ಎಲ್ಲರೂ ಸೋದರ ಸೋದರಿಯರು ಎಂದು ತಿಳಿದು ಯಾವ ಭೇದಭಾವವನ್ನೂ ಭಾವಿಸದೆ ಎಲ್ಲರೂ ಎಲ್ಲರ ಒಳಿತಿಗಾಗಿ ಶ್ರಮಿಸುವ ಅಗತ್ಯವಿದೆ ಎನ್ನುವ ಸಮಗ್ರತಾ ಮಾನವತಾವಾದವನ್ನು ಸಮರ್ಥಿಸಿದ ರಾಷ್ಟ್ರಾತೀತವಾದಿ, ಮಾನವತಾವಾದಿ ಸ್ವಾಮಿ ವಿವೇಕಾನಂದರು.

ಅವರು ಮಾನಸಿಕವಾಗಿ ನಾವೆಲ್ಲಾ ಒಂದು ಎಂದು ತಿಳಿಯಲು ಭಾರತೀಯ ತಾತ್ತ್ವಿಕ ನಿಲುವಾದ '**ಅಹಂ ಬ್ರಹ್ಮಾಸ್ಮಿ**', '**ತತ್ ತ್ವಂ ಅಸಿ**' ಎನ್ನುವುದೇ ಆಧಾರ ಸೂತ್ರ ಎಂದರು. ಅದನ್ನು ಮನಗಾಣಲು ಅಗತ್ಯವಾದ ತಿಳುವಳಿಕೆಯನ್ನು ಸರಳವಾದ ಉಪನ್ಯಾಸಗಳಿಂದ ವಿಶ್ವದಾದ್ಯಂತ ತಲುಪಿಸಿದರು. ಆ ತಿಳುವಳಿಕೆಯನ್ನು ಸ್ವಾನುಭವವಾಗಿಸಿಕೊಳ್ಳಲು ಅತ್ಯಗತ್ಯವಾದ ರಾಜಯೋಗವನ್ನು ಪರಿಚಯಿಸಿದರು. ದುರ್ಬಲರ, ತುಳಿತಕ್ಕೆ ಒಳಗಾದವರ, ಅಸಹಾಯಕರ, ದುಃಖ ನೋವುಗಳಿಂದ ಪೀಡಿತರಾದವರ ದುಸ್ಥಿತಿಯ ಬಗೆಗಿನ ಅರಿವನ್ನು ಮೂಡಿಸಿ ಅವರ ಮರ್ಯಾದೆಗೆ ಕುಂದು ಬಾರದಂತೆ ಸೇವೆಯನ್ನು ಒದಗಿಸಬೇಕಾದ ಅಗತ್ಯ ಇರುವುದನ್ನು ಮನಗಾಣಿಸಿಕೊಟ್ಟರು. ಸೇವಾಕಾರ್ಯದಲ್ಲಿ ಅಹಂಕಾರಕ್ಕೆ ಸ್ಥಳಾವಕಾಶ ಇಲ್ಲ ಎಂಬುದನ್ನು ಎಲ್ಲರೂ ದೈವಿಕತೆಯ ಬಗೆ ಬಗೆ ರೂಪಗಳು, '**ಅಮೃತಸ್ಯ ಪುತ್ರಾಃ**' ಎಂಬ ನೆಲೆಯಲ್ಲಿ ಅರ್ಥಮಾಡಿಸಿದರು. ಧಾರ್ಮಿಕ ಆದರ್ಶವಾದ ಸಜ್ಜನಿಕೆ, ತ್ಯಾಗ, ವೈರಾಗ್ಯ, ಔದಾರ್ಯ, ದಾನ ಮೊದಲಾದವುಗಳಿಗೆ ಅರ್ಥಬರುವುದು ವಿಜ್ಞಾನ ತಂತ್ರಜ್ಞಾನಗಳ ಸೂಕ್ತ ತಿಳುವಳಿಕೆಯನ್ನು ಬಳಸಿಕೊಂಡು ಭೌತಿಕ ಸುಖ ಸೌಕರ್ಯಗಳ ಸಮೃದ್ಧಿಯನ್ನು ಸಾಧಿಸಲು ಪ್ರಯತ್ನಿಸಿದಾಗ ಮಾತ್ರ ಎಂದು ವೈಜ್ಞಾನಿಕ ಅರಿವಿನ ಮಹತ್ವವನ್ನು ಎತ್ತಿಹಿಡಿದರು. ಮಾನಸಿಕ ದೃಢತೆ ಮತ್ತು ದೈಹಿಕ ದೃಢತೆಗಳು ಪರಸ್ಪರ ಪೂರಕವಾದದ್ದು, ಒಂದನ್ನು ಬಿಟ್ಟು ಇನ್ನೊಂದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ದೇಹಬಲ, ಭೌತಿಕ ಬಲಗಳು ಮನೋಬಲದಷ್ಟೇ ಮುಖ್ಯವಾದದ್ದು ಎಂದರು; ವೈಯಕ್ತಿಕವಾಗಿ, ರಾಷ್ಟ್ರೀಯವಾಗಿ, ಸಾಮುದಾಯಿಕವಾಗಿ ಸುರಕ್ಷಿತ ಬದುಕು ಎಲ್ಲರದು ಆಗಬೇಕಾಗಿರುವುದನ್ನು ಸಮರ್ಥಿಸಿದರು. ಸುಂದರವಾದ ಸುಸಜ್ಜಿತವಾದ ಶಾಂತಿ ಸೌಹಾರ್ದಯುತವಾದ ಸಶಕ್ತ ಬದುಕಿನ ಮೂಲಭೂತ ಸೂತ್ರ ನಿಷ್ಕಲ್ಮಶವಾದ ಮಾನವೀಯವಾದ ನಿಸ್ವಾರ್ಥ ಸೇವಾಮನೋಭಾವನೆ ಎಂಬುದು ಸ್ವಾಮಿ ವಿವೇಕಾನಂದರ ಒಟ್ಟಾರೆ ಜೀವನ ಸಂದೇಶ.

ನಾವು ಈಗ ವಿವೇಕಾನಂದರು ಈ ಹಿಂದೆ ಶಿಕಾಗೋ ನಗರದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಪ್ರಾಚ್ಯ ಮತ್ತು ಪಾಶ್ಚಾತ್ಯರ ನಡುವೆ ಮಧುರ ಬಾಂಧವ್ಯದ ಬೆಸುಗೆಯನ್ನು ಬೆಸೆದ ಉಪನ್ಯಾಸದ ೧೨೫ನೇ ವರ್ಷಾಚರಣೆಯ ಸಂಭ್ರಮದಲ್ಲಿದ್ದೇವೆ. ಅದೇ ವೇಳೆಗೆ ಭಯೋತ್ಪಾದಕತೆಯ ಮತ್ತು ಸಣ್ಣತನದ ಅಸಂಖ್ಯಾತ ರೂಪಗಳು ವಿಜೃಂಭಿಸುತ್ತಿರುವುದನ್ನು ಕಂಡು ಕಂಗಾಲಾಗಿದ್ದೇವೆ. ಅತ್ಯಾವಶ್ಯಕವಾಗಿ ಆಗಬೇಕಾದದ್ದು, ನಾವೆಲ್ಲರೂ ದೈವಾಂಶಸಂಭೂತರು ಎಂಬುದನ್ನು ಎತ್ತಿಹಿಡಿದು ಭೌತಿಕ ಮತ್ತು ಮಾನಸಿಕವಾದ ಸಮೃದ್ಧ, ಗೌರವಯುತ, ಸ್ವತಂತ್ರ ಸುಖೀ ಬದುಕಿಗಾಗಿ ಪರಸ್ಪರ ಸಹಕಾರ ಭಾವನೆಯಿಂದ ಕೈ ಕೈ ಕೂಡಿಸಿ ದುಡಿಯೋಣ ಎನ್ನುವ ವಿವೇಕಾನಂದರ ವಾಣಿಯಿಂದ ಇನ್ನಾದರೂ ಜಾಗೃತರಾಗುವುದು. ❋

*(೨೦೧೮ರ ಸೆಪ್ಟೆಂಬರ್ ೧೭, ೧೮ರಂದು ಮೈಸೂರು ವಿಶ್ವವಿದ್ಯಾನಿಲಯದ ತತ್ತ್ವಶಾಸ್ತ್ರ ವಿಭಾಗ ಮತ್ತು ವಿವೇಕಾನಂದ ಅಧ್ಯಯನ ಪೀಠದ ಸಂಯುಕ್ತ ಆಶ್ರಯದಲ್ಲಿ ನಡೆದ '**ವಿವೇಕಾನಂದರ ಮಾನವತಾವಾದ - ಒಂದು ಲೋಕಸಂಗ್ರಹ ದೃಷ್ಟಿ**' ಎಂಬ ರಾಷ್ಟ್ರೀಯ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧವಿದು.)*